'ಅಯ್ಯೋ ಶಿವನೇ, ನೀವು ಹುಟ್ಟಿದ್ದಾದರೂ ಯಾವ ಇಸವಿಯಲ್ಲಿ ಅನ್ನೋದನ್ನಾದ್ರೂ ಹೇಳೀಪ್ಪಾ ಅದಾದ್ರೂ ನೆನಪಿರಬೇಕಲ್ಲವಾ ನಿಮಗೆ?'

'ಅಯ್ಯೋ, ನೆನಪಿಲ್ಲದೆ ಏನು ಕುಶಾಲಪ್ಪನೋರೇ. ಇಷ್ಟೆಲ್ಲಾ ನೆನಪಿಟ್ಟುಕೊಂಡೋನಿಗೆ ಅದೊಂದು ನೆನಪಿರೋದಿಲ್ವಾ? ನೋಡೀ, ನನ್ನಪ್ಪ ಸಾಯೋಕೆ ಎರಡು ವರ್ಷ ಇದ್ದಾಗ ನಾನು ಹುಟ್ಟಿದ್ದು. ಅಂದ್ರೆ ನನ್ನಪ್ಪ ಸತ್ತಾಗ ನನಗೆ ಎರಡು ವರ್ಷ. ಕೆಟ್ಟ ನಕ್ಷತ್ರದಲ್ಲಿ ನಾನು ಹುಟ್ಟಿದ್ದಂತೆ. ಅದಕ್ಕೇ ಮಗು ಅಪ್ಪನ್ನ ಕಳಕೊಳ್ತು ಅಂತ ನೆಂಟರಿಷ್ಟರು ಮಾತಾಡ್ಕೋತಿದ್ದರು!'

ರಾಮರಾಯರ ಈ ಉತ್ತರದಿಂದ ಕುಶಾಲಪ್ಪನವರಿಗೆ ಹುಚ್ಚು ಹಿಡಿಯೋದೊಂದು ಬಾಕಿ. ಅವರು ಹೇಳೋದೆಲ್ಲಾ ಸತ್ಯವೇ ಇರಬಹುದು. ಆದರೆ, ಈ ಯಾವ ಕ್ಲೂನಿಂದಲೂ ಹುಡುಗಿಯ ವಯಸ್ಸು ಕಂಡು ಹಿಡಿಯೋಕೆ ಕುಶಾಲಪ್ಪನವರಿಂದ ಸಾಧ್ಯವಾಗಲಿಲ್ಲ. ಕುಶಾಲಪ್ಪನವರು ತಾಳ್ಮೆಗೆಟ್ಟು ಹೀಗೆಂದರು:

'ರಾಮರಾಯ್ರೇ, ನಿಮ್ಮ ಹತ್ರ ನಿಮ್ಮ ಮಗಳ ವಯಸ್ಸು ಕೇಳ್ತಾ ಇದೀನಲ್ಲಾ, ನನಗೆ ಬುದ್ಧಿ ಇಲ್ಲ ಬಿಡಿ.'

'ಆದ್ರೆ ನನಗೆ ಬುದ್ಧಿ ಇದೆ ನೋಡಿ.'

'ಬುದ್ಧಿ ಇದೆ ಅಂತೀರಾ? ಅಗತ್ಯಕ್ಕಿಂತ ಜಾಸ್ತೀನೇ ನಿಮಗೆ ಬುದ್ಧಿ ಇದೆ ಅಂತ ನನಗೀಗ ಗೊತ್ತಾಯ್ತು ಬಿಡಿ... ಅದು ಹಾಗಿರಲಿ, ಅಂದ ಹಾಗೆ ನಿಮ್ಮ ಮಗಳಿಗೆ ಎಂಥಾ ವರ ಬೇಕು ಅನ್ನೋದನ್ನಾದ್ರೂ ಹೇಳಿ. ವಯಸ್ಸಿನ ವಿಚಾರ ನಂತರ ನೋಡೋಣ. ಮಗಳ ಜಾತಕ ಗೀತಕ ಇಟ್ಟಿದ್ದರೆ ಗೊತ್ತಾಗುತ್ತೆ ಬಿಡಿ. ಇಲ್ದೆ ಇದ್ರೆ ನಿಮ್ಮ ಹೆಂಗಸರನ್ನ ಕೇಳಿ.'

'ಸರಿ ಬಿಡಿ. ಜಾತಕ ಯಾವ ಲೋಕದಲ್ಲಿ ಇದೆ ಅಂತ ಪತ್ತೆ ಮಾಡ್ತೀನಿ. ಅಂದ ಹಾಗೆ ಕುಶಾಲಪ್ಪನವರೇ, ಮೊದಲನೆಯದಾಗಿ ನಮ್ಮ ಹುಡುಗೀ ಕೈ ಹಿಡಿಯುವವನಿಗೆ ಅಪ್ಪ ಅಮ್ಮ ಇರಬಾರದು...'

'ಹೌದಾ? ಅಲ್ರೀ ರಾಮರಾಯರೇ, ಅಪ್ಪ ಅಮ್ಮ ಇಲ್ದೆ ಅದು ಹೇಗ್ರೀ ಹುಡುಗ ಹುಟ್ತಾನೆ? ಆಕಾಶದಿಂದ ಉದುರಿ ನೆಲಕ್ಕೆ ಬೀಳ್ತಾನೇನು? ಅಷ್ಟು ಎತ್ತರದಿಂದ ಬಿದ್ರೆ ಅವ್ನು ಜೀವಸಹಿತ ಉಳೀತಾನೇನು?'

'ಅಯ್ಯೋ, ನನ್ನ ಮಾತು ನಿಮಗೆ ಅರ್ಥಾನೇ ಆಗ್ತಾ ಇಲ್ಲ ಅಂತ ಕಾಣುತ್ತೆ. ಅಪ್ಪ ಅಮ್ಮ ಇಲ್ದೆ ಮಗ ಹುಟ್ಟೋಕೆ ಸಾಧ್ಯವಿಲ್ಲ ಅನ್ನೋದು ನನಗೂ ಗೊತ್ರೀ. ಅವ್ರು ಜೀವಂತವಾಗಿ ಇರಬಾರದು ಅಂತ ನನ್ನ ಅಭಿಪ್ರಾಯ.'

'ಓ ಹಾಗೋ ಸರಿ, ಆಮೇಲೆ?'

'ಹುಡುಗೀಗೆ ಅಕ್ಕ ತಂಗಿಯರು, ಅಣ್ಣ ತಮ್ಮಂದಿರು ಇಲ್ಲದಿದ್ರೆ ಒಳ್ಳೇದು.'

'ಅಂದ್ರೆ ಒಂಥರಾ ಅವ್ನು ಬೇವಾರ್ಸಿ ಆಗಿರಬೇಕು ಅಂತ ತಾನೇ ನಿಮ್ಮ ಅಭಿಪ್ರಾಯ?'

'ಒಂದು ರೀತಿ ಹಾಗೇ ಅಂತಿಟ್ಕೊಳ್ಳಿ. ಅವ್ರೆಲ್ಲ ಇದ್ರೆ ನಮ್ಮ ಹುಡುಗಿ ನೆಮ್ಮದಿಯಾಗಿ ಇರೋಹಾಗಿಲ್ಲ ಇವ್ರೇ. ಬರೀ ಕಿರಿಕಿರಿ. ಅವ್ಳಿಗೆ ಸ್ವಾತಂತ್ರ್ಯಾನೇ ಇರೋಲ್ಲ. ಅದ್ಕೇ ಆ ಥರದ ವರನನ್ನು ಹುಡುಕ್ತಾ ಇರೋದು.'

'ನೀವು ಬಹಳ ದೂರದ ಯೋಚನೆ ಮಾಡ್ತೀರಿ ರಾಮರಾಯ್ರೇ. ನನಗೆ ಇವೆಲ್ಲಾ ಹೊಳೆಯೋದೇ ಇಲ್ಲ ನೋಡಿ.'

'ನನಗೆ ನೀವು ಈಗಾಗಲೇ ಹೇಳಿದ ಹಾಗೆ ಬುದ್ಧಿ ಇದೆ ನೋಡಿ. ನೀವೇ ಅಭಿಪ್ರಾಯಪಟ್ಟ ಹಾಗೆ